ತುರ್ತು

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ: 08-08-2018

**ನೆನಪೋಲೆ**

ವಿಷಯ : 2017-18ನೇ ಸಾಲಿನ ಅರ್ಥಿಕ ವೆಚ್ಚದ ದೈನಂದಿನ ಚಟುವಟಿಕೆ/ವಿಶೇಷ ಶಿಬಿರದ ಲೆಕ್ಕ ಪತ್ರಗಳ ಮತ್ತು ಚಟುವಟಿಕೆಗಳ ವರದಿ ಸಲ್ಲಿಸುವ ಬಗ್ಗೆ.

ಉಲ್ಲೇಖ: 1) ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ವಿ.ಶಿ-ಅನು/2017-18 ದಿನಾಂಕ: 02-11-2017
2) ಸಂಖ್ಯೆ:ಡಿಟಿಇ/ಎನ್‌ಎಸ್‌ಎಸ್/14-ಬಿ/ದೈ.ಅನು-1&2/2017-18 ದಿನಾಂಕ: 25-10-2017

* * * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖದ ಅನುಸಾರ 2017-18ನೇ ಸಾಲಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ದೈನಂದಿನ ಚಟುವಟಿಕೆ ಹಾಗೂ ವಿಶೇಷ ಶಿಬಿರಗಳನ್ನು ಕಾರ್ಯಾನುಷ್ಠಾನಗೊಳಿಸಲು ಉಲ್ಲೇಖ (1) ಮತ್ತು (2) ರ ಪ್ರಕಾರ ಅನುದಾನ ಬಿಡುಗಡೆ ಮಾಡಿ, ಬಿಡುಗಡೆ ಮಾಡಿದ ಅನುದಾನಕ್ಕೆ, ಕಾರ್ಯಚಟುವಟಿಕೆಗಳ ವರದಿ ಹಾಗೂ ಲೆಕ್ಕಪತ್ರಗಳನ್ನು ನಿಗಧಿತ ನಮೂನೆಗಳಲ್ಲಿ ಮೂಲ ರಸೀದಿಗಳ ಸಹಿತ ಆಯಾ ಅರ್ಥಿಕ ವರ್ಷದ ಅಂತ್ಯದಲ್ಲಿ ದಿನಾಂಕ:31-03-2018 ರಂದು ಲೆಕ್ಕ ಪತ್ರಗಳನ್ನು ಸಲ್ಲಿಸಲು ಸೂಚಿಸಲಾಗಿದ್ದರೂ ಸಹ ಈ ಕೆಳಕಂಡ ಪಾಲಿಟೆಕ್‌ನಿಕ್ ಗಳಿಂದ ಇದುವರೆಗೂ ಲೆಕ್ಕ ಪತ್ರಗಳು ಮತ್ತು ವರದಿಗಳು ಈ ಕಛೇರಿಗೆ ತಲುಪಿರುವುದಿಲ್ಲ.

| ಕ್ರ. ಸಂ | ಪಾಲಿಟೆಕ್ನಿಕ್ ಹೆಸರು | ಚಟುವಟಿಕೆಯ ಲೆಕ್ಕ ಪತ್ರಗಳ ವಿವರ |
|---|---|---|
| 1. | ಪಿವಿಪಿ ಪಾಲಿಟೆಕ್ನಿಕ್ ಬೆಂಗಳೂರು | ದೈನಂದಿನ ಚಟುವಟಿಕೆ |
| 2. | ಸರ್ಕಾರಿ ಪಾಲಿಟೆಕ್ನಿಕ್ ತುಮಕೂರು | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 3. | ಬಾಪೂಜಿ ಪಾಲಿಟೆಕ್ನಿಕ್ ಶಾಬನೂರು | ದೈನಂದಿನ ಚಟುವಟಿಕೆ |
| 4. | ಎಸ್.ಟಿ.ಜಿ ಪಾಲಿಟೆಕ್ನಿಕ್ ಹರಪ್ಪನಹಳ್ಳಿ | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 5. | ಶ್ರೀದೇವಿ ಪಾಲಿಟೆಕ್ನಿಕ್ ತುಮಕೂರು | ದೈನಂದಿನ ಚಟುವಟಿಕೆ |
| 6. | ಎಂ.ಇ.ಐ ಪಾಲಿಟೆಕ್ನಿಕ್ ಬೆಂಗಳೂರು | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 7. | ಸರ್ಕಾರಿ ಪಾಲಿಟೆಕ್ನಿಕ್ ಕೆ.ಆರ್ ಪೇಟೆ | ದೈನಂದಿನ ಚಟುವಟಿಕೆ |
| 8. | ಶ್ರೀಮತಿ ಎಲ್ ವಿ ಪಾಲಿಟೆಕ್ನಿಕ್ ಹಾಸನ | ದೈನಂದಿನ ಚಟುವಟಿಕೆ |
| 9. | ಎನ್ ಆರ್ ಎ ಎಂ ಪಾಲಿಟೆಕ್ನಿಕ್ ನಿಟ್ಟೆ | ದೈನಂದಿನ ಚಟುವಟಿಕೆ |
| 10 | ಶ್ರೀಮತ್ ಪಾಲಿಟೆಕ್ನಿಕ್ ಮೈಸೂರು | ದೈನಂದಿನ ಚಟುವಟಿಕೆ |
| 11. | ಡಾ. ಟಿ.ಎಂ.ಎ.ಐ ಪಾಲಿಟೆಕ್ನಿಕ್ ಮಣಿಪಾಲ | ದೈನಂದಿನ ಚಟುವಟಿಕೆ |
| 12 | ಸರ್ಕಾರಿ ಪಾಲಿಟೆಕ್ನಿಕ್ ಶ್ರೀರಂಗಪಟ್ಟಣ | ದೈನಂದಿನ ಚಟುವಟಿಕೆ |
| 13. | ಸರ್ಕಾರಿ ಪಾಲಿಟೆಕ್ನಿಕ್ ಚಾಮರಾಜಪೇಟೆ | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 14 | ಡಿ ಬನ್ನುಮಯ್ಯ ಪಾಲಿಟೆಕ್ನಿಕ್ ಮೈಸೂರು | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 15. | ಕೆ.ಹೆಚ್.ಕೆ ಪಾಲಿಟೆಕ್ನಿಕ್ ಧಾರವಾಡ | ದೈನಂದಿನ ಚಟುವಟಿಕೆ |
| 16 | ಕೆ.ಎಲ್. ಇ.ಎಸ್ ಪಾಲಿಟೆಕ್ನಿಕ್ ಹುಬ್ಬಳ್ಳಿ | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 17. | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಹುಬ್ಬಳ್ಳಿ | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 18. | ಎಂ.ವಿ ರೂರಲ್ ಪಾಲಿಟೆಕ್ನಿಕ್ ಹಂಸಭಾವಿ | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 19 | ಸಿ.ಬಿ ಕೋರಿ ಪಾಲಿಟೆಕ್ನಿಕ್ ಚಿಕ್ಕೋಡಿ | ದೈನಂದಿನ ಚಟುವಟಿಕೆ |
| 20 | ಸರ್ಕಾರಿ ಪಾಲಿಟೆಕ್ನಿಕ್ ವಿಜಯಪುರ | ದೈನಂದಿನ ಚಟುವಟಿಕೆ |

| | | |
|---|---|---|
| 21 | ಸರ್ಕಾರಿ ಪಾಲಿಟೆಕ್ನಿಕ್ ಹುಬ್ಬಳ್ಳಿ | ದೈನಂದಿನ ಚಟುವಟಿಕೆ |
| 22 | ಮೌಂಟನ್ ಫರಾನ್ ಪಾಲಿಟೆಕ್ನಿಕ್, ಹಳೆ ಹುಬ್ಬಳ್ಳಿ | ದೈನಂದಿನ ಚಟುವಟಿಕೆ |
| 23 | ಸರ್ಕಾರಿ ಪಾಲಿಟೆಕ್ನಿಕ್ ಕಲಬುರಗಿ | ದೈನಂದಿನ ಚಟುವಟಿಕೆ |
| 24 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಲಬುರಗಿ | ದೈನಂದಿನ ಚಟುವಟಿಕೆ |
| 25 | ಜೆ.ಎನ್ ಪಾಲಿಟೆಕ್ನಿಕ್ ಠಾಣಕೂಸನೂರು | ದೈನಂದಿನ ಚಟುವಟಿಕೆ |
| 26 | ಎಸ್.ಇ.ಎಸ್ ಪಾಲಿಟೆಕ್ನಿಕ್ ಸೀರುಗುಪ್ಪ | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 27 | ಸರ್ಕಾರಿ ಪಾಲಿಟೆಕ್ನಿಕ್ ಅಪ್ಜಲ್‌ಪುರ | ದೈನಂದಿನ ಚಟುವಟಿಕೆ |
| 28 | ಹೆಚ್.ಕೆ.ಇ.ಎಸ್ ಪಾಲಿಟೆಕ್ನಿಕ್ ಕಲಬುರಗಿ | ದೈನಂದಿನ ಚಟುವಟಿಕೆ & ವಿಶೇಷ ಶಿಬಿರ |
| 29 | ಸರ್ಕಾರಿ ಪಾಲಿಟೆಕ್ನಿಕ್ ಕಾರಟಗಿ | ದೈನಂದಿನ ಚಟುವಟಿಕೆ |

2017–18ನೇ ಸಾಲಿನ ಲೆಕ್ಕಪತ್ರಗಳನ್ನು ಲೆಕ್ಕ ಪರಿಶೋಧನಾ ತಪಾಸಕರಿಂದ ತಪಾಸಣೆ ನಡೆಯುತ್ತಿದ್ದು ಈ ಲೆಕ್ಕ ತಪಾಸಣೆಗಾಗಿ ಲೆಕ್ಕ ಪತ್ರಗಳನ್ನು ಹಾಜರುಪಡಿಸಬೇಕಾಗಿರುವುದರಿಂದ, ತಮ್ಮ ಸಂಸ್ಥೆಗೆ 2017–18ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಖರ್ಚು ವೆಚ್ಚಗಳ ಲೆಕ್ಕ ಪತ್ರಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 18–08–2018 ರ ತನಕ ಕಾಲಾವಕಾಶವನ್ನು ನೀಡಲಾಗಿರುತ್ತದೆ, ಪ್ರಾಂಶುಪಾಲರು ಕೂಡಲೇ ಗಮನ ಹರಿಸಿ ಲೆಕ್ಕ ಪತ್ರಗಳನ್ನು ಸಲ್ಲಿಸಲು ಸೂಕ್ತ ಕ್ರಮವನ್ನು ತೆಗೆದುಕೊಂಡು, ಅನುದಾನ ಖರ್ಚಾಗದಿದ್ದಲ್ಲಿ ಖರ್ಚಾಗದ ಅನುದಾನವೆಂದು (Unspent Balance) ಪರಿಗಣಿಸಿ ನಿರ್ದೇಶನಾಲಯದ ಎನ್ ಎಸ್ ಎಸ್ ಕಛೇರಿಗೆ ಡಿಡಿ/ಚೆಕ್ ಮೂಲಕ ಸಲ್ಲಿಸುವುದು.

2017–18ನೇ ಸಾಲಿನ ಲೆಕ್ಕಪತ್ರಗಳ ಸಲ್ಲಿಕೆಯ ವಿಳಂಬದಿಂದಾಗಿ ನಿರ್ದೇಶನಾಲಯದ ಎನ್‌ಎಸ್‌ಎಸ್ ಕಛೇರಿಗೆ ಸರ್ಕಾರದಿಂದ 2018–19ನೇ ಸಾಲಿಗೆ ಅನುದಾನವನ್ನು ಪಡೆಯುವ ಕಾರ್ಯದಲ್ಲಿ ಉಂಟಾಗುವ ತೊಂದರೆಗಳಿಗೆ ತಾವು ನೇರವಾಗಿ ಕಾರಣರಾಗಿರುತ್ತೀರಿ, ಆದ ಕಾರಣ ಮೊದಲ ಆದ್ಯತೆಯ ಮೇರೆಗೆ ಲೆಕ್ಕ ಪತ್ರಗಳನ್ನು ಸಲ್ಲಿಸಲು ಅಂತಿಮವಾಗಿ ಸೂಚಿಸಲಾಗಿದೆ, ತಪ್ಪಿದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ನಿರ್ದೇಶಕರು

**ಇವರಿಗೆ:–** ಮೇಲ್ಕಂಡ ಎಲ್ಲಾ ಪಾಲಿಟೆಕ್ನಿಕ್, ಪ್ರಾಚಾರ್ಯರಿಗೆ –ಸೂಕ್ತ ಕ್ರಮಕ್ಕಾಗಿ

ಪ್ರತಿ:– 1) ಇ–ಗೌರ್ನರ್ಸ್ ಇಲಾಖಾ ಅಂತರ್ ಜಾಲ ತಾಣದಲ್ಲಿ ಪ್ರಕಟಿಸಲು
2) ಕಛೇರಿ ಪ್ರತಿ